ಜಾಣರ ಪೆಟ್ಟಿಗೆ

ವಾರದ ಪತ್ರ

## ಚಂದ ಪುರಂದರ! ಆದರೆ...

ಕಲರ್ಸ್ ಕನ್ನಡದ 'ದಾಸಪುರಂದರ' ಚೆನ್ನಾಗಿ ಮೂಡಿಬರುತ್ತಿದೆ. ಆದರೂ ಓರೆಕೋರೆಗಳು ಉಳಿದಿವೆ. ಬಾಲಕ ಶ್ರೀನಿವಾಸನಿಗೆ (ಪುರಂದರ ದಾಸ) ಬಾಲ್ಯದಲ್ಲಿ ಸಂಗೀತ ಮಾತ್ರವಲ್ಲದೆ, ಆ ಕಾಲದ ಸಾಂಪ್ರದಾಯಿಕ ಶಿಕ್ಷಣವನ್ನೂ ನೀಡಿದ್ದರು. ಧಾರಾವಾಹಿಯಲ್ಲಿ ಆ ಚಿತ್ರಣ ಇರಬೇಕಿತ್ತು. ಪುರಾಣಪುರುಷರಾದ 'ಶ್ರೀರಾಮ', 'ಶ್ರೀಕೃಷ್ಣ' ಅವರೂ ಶಿಕ್ಷಣ ಪಡೆದಿದ್ದರು.

ಮೂಲಕಥೆಯಲ್ಲಿ ಕನ್ನಡ ಹಾಗೂ ಸಂಸ್ಕೃತದಲ್ಲಿ ಪುರಂದರದಾಸ ಶಿಕ್ಷಣ ಪಡೆದಿದ್ದರು ಎಂದು ಉಲ್ಲೇಖವಿದೆ. ಯಾವುದೇ ಐತಿಹಾಸಿಕ ಕಥೆ ತನ್ನ ಮೂಲ ಸತ್ವದ ಜೊತೆ ಕಲ್ಪನೆಯನ್ನು ಬೆಸೆದುಕೊಳ್ಳಬೇಕು. ಸೃಜನಶೀಲವಾಗಿ ಅದು ವಿಸ್ತಾರಗೊಳ್ಳಬೇಕು. ಆದರೆ, ಕಥೆಯ ಪ್ರಮುಖ ಘಟನೆಗಳನ್ನು ಅದು ಒಳಗೊಂಡಿರಲೇಬೇಕು. ಅಂದಿನ ಕಾಲಘಟ್ಟದ ಸ್ಥಿತಿಗತಿ, ವೇಷ–ಭೂಷಣ ದೃಶ್ಯದಲ್ಲಿ ಮೂಡಿಬಂದರೆ, ಪಾತ್ರದ ಮಹತ್ವ ಹೆಚ್ಚುತ್ತದೆ.

—ಪೂರ್ಣಿಮಾ ಮೂರ್ತಿ, ಬೆಂಗಳೂರು

## ಗೌರಿಗೆ ಮಂಗಳ ಹಾಡಿ

'ಅತಿಯಾದರೆ ಅಮೃತವೂ ವಿಷ' ಎಂಬ ಮಾತು 'ಮಂಗಳ ಗೌರಿ'ಗೂ ಅನ್ವಯವಾಗುತ್ತದೆ. ವರ್ಷಗಳಿಂದ ದಯವಿಟ್ಟು ನಿಲ್ಲಿಸಿ ಪುಣ್ಯ ಕಟ್ಟಿಕೊಳ್ಳಿ ಎಂದು ವೀಕ್ಷಕರು ಗೋಳಿಡುತ್ತಿದ್ದಾರೆ.

ವಿಪರ್ಯಾಸ ಎಂದರೆ ಈ ಮಂಗಳ ಗೌರಿ ಇಂದಿಗೂ ಗೊತ್ತುಗುರಿ ಇಲ್ಲದ ಹುಚ್ಚು ಕುದುರೆ ರೀತಿ ಓಡುತ್ತಿದ್ದಾಳೆ. ಸಾಲದ್ದಕ್ಕೆ 'ಸೀರಿಯಲ್ ಸಂತೆ' ಅನ್ನೋ ವಿಶೇಷ ಶೋ ಬೇರೆ. ಈ ಧಾರಾವಾಹಿ ಹೇಗೆ ಪ್ರಾರಂಭ ಮಾಡಲಾಗಿತ್ತು ಅನ್ನೋದೇ ನಿರ್ದೇಶಕರಿಗೆ ಮರೆತು ಹೋಗಿರಬೇಕು. ಹಾಗಾಗಿ ಹೇಗೆ ಅಂತ್ಯಗೊಳಿಸಬೇಕು ಎನ್ನುವುದು ಗೊತ್ತಾಗದೆ ಮೊಂಡುತನದಲ್ಲಿ ಮುಂದುವರಿಸುತ್ತಿದ್ದಾರೆ ಎಂದೆನಿಸುತ್ತದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಕಾನೂನು ಮುರಿಯುವ ಜಾಹೀರಾತು

ಟೀವಿಗಳಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಹಲವು ಸಮಸ್ಯೆಗಳ ನಿವಾರಣೆಗೆ ಇಂತಹ ಔಷಧ ಅಥವಾ ಪದಾರ್ಥಗಳನ್ನು ಬಳಸಿ, ಯಾವುದೇ ಅಡ್ಡ ಪರಿಣಾಮ ಇಲ್ಲದೆ ಗುಣವಾಗುತ್ತೀರಿ... ಹೀಗೆ ರಂಗು ರಂಗಿನ ಜಾಹೀರಾತುಗಳು ಸಾಮಾನ್ಯ. ತೊಂದರೆಯಲ್ಲಿ ಇರುವವರು ಪರಿಹಾರಕ್ಕಾಗಿ ಜಾಹೀರಾತಿಗೆ ಮಾರುಹೋಗುವುದು ವಾಸ್ತವ. ನುರಿತ ವೈದ್ಯರ ಸಲಹೆ ಇಲ್ಲದೇ ಯಾವುದೇ ಔಷಧಗಳನ್ನು ಸೇವಿಸಬಾರದು. ಇದನ್ನು ವೈದ್ಯಕೀಯ ಕಾನೂನು ಕೂಡ ಪ್ರತಿಪಾದಿಸುತ್ತದೆ. ಅಂದಮೇಲೆ, ಔಷಧಿಗಳ ಜಾಹೀರಾತು ಕಾನೂನು ಬಾಹಿರವಲ್ಲವೇ? ಸರ್ಕಾರ ಮತ್ತು ವೈದ್ಯಕೀಯ ರಂಗ ಈ ವಿಚಾರದಲ್ಲಿ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬೇಕು.

—ರಾಜೀವ್ ಮಾಗಲ್

## ಪಡ್ಡೆ ಕೂಡ ಎಂ.ಡಿ.

ಕಲರ್ಸ್ ಕನ್ನಡದ 'ದೊರೆಸಾನಿ'ಯಲ್ಲಿ ಸತ್ಯವತಿಯ ಗಯ್ಯಾಳಿ ಪಾತ್ರ ನೋಡುಗರಲ್ಲಿ ಕಿರಿಕಿರಿ ಅನಿಸುತ್ತಿದೆ. ಆ ಪಾತ್ರ ಕಥೆಗೆ ಎಷ್ಟೇ ಪೂರಕವಾಗಿದ್ದರೂ, ಅದರಲ್ಲೇ ಕಥೆಯ ಜೀವಾಳ ಅಡಗಿದ್ದರೂ ಅದು ತನ್ನ ಮಿತಿಯನ್ನು ಮೀರಬಾರದು. ವೀಕ್ಷಕರು ಅಸಹ್ಯ ಪಡುವಂತಿದೆ.

ಒಂದು ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಆನಂದನ ಹೇರ್ ಸ್ಟೈಲ್ ಆ ಹುದ್ದೆಗೆ ಶೋಭೆ ಅನಿಸುವುದಿಲ್ಲ. ಅವರು ಪಡ್ಡೆ ಹುಡುಗರಂತೆ ಕಾಣುತ್ತಾರೆ. ಅವರ ದೇಹದಾರ್ಢ್ಯತೆ, ದೇಹಭಾಷೆ ಮತ್ತು ಬಾಹ್ಯ ನೋಟದಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಎಂದು ಕಾಣುವುದು ಕಷ್ಟವಾಗುತ್ತದೆ. ನಿರ್ದೇಶಕರು ಇಂತಹ ಸೂಕ್ಷ್ಮಗಳನ್ನೂ ಗಮನಿಸಬೇಕು.

—ರಮಾನಂದ ಶರ್ಮಾ

## ಅಂತರಾಳದ ಕೂಗು

ಧಾರಾವಾಹಿಗಳ ಜಗತ್ತು ದಿನದಿಂದ ದಿನಕ್ಕೆ ಹಿರಿದಾಗುತ್ತಿದೆ. ಒಂದಕ್ಕಿಂತ ಒಂದು ಭಿನ್ನ ಎಂದು ಅನಿಸಿದ್ದರೂ ಮನೆಮಂದಿಯೆಲ್ಲ ಕುಳಿತು ನೋಡುವಂತಹ ಧಾರಾವಾಹಿಗಳು ಕಡಿಮೆ. ಆಡಂಬರದ ಬದುಕು, ನೆಗೆಟಿವ್ ಪಾತ್ರಗಳ ವಿಜೃಂಭಣೆ, ಒಡವೆ–ವಸ್ತ್ರಗಳ ಪ್ರದರ್ಶನ, ಅಂತ್ಯವಿಲ್ಲದ ಅಸಂಬದ್ಧ ಕಥೆ – ಇಂತಹ ಧಾರಾವಾಹಿಗಳನ್ನೇ ನೋಡಿ ವೀಕ್ಷಕರು ಬೇಸತ್ತಿದ್ದಾರೆ.

ಸಿರಿ ಕನ್ನಡ ವಾಹಿನಿ 'ಯುಗಾಂತರ'ವನ್ನು ಭಿನ್ನವಾಗಿ ಕೊಡುತ್ತಿದೆ. ಕಥೆಯ ವಿಚಾರ, ಸಾಹಿತ್ಯ ಬಹುಕಾಲ ಮನಸ್ಸಿನಲ್ಲಿ ಉಳಿಯುವಂತೆ ಇದೆ. 13 ವರ್ಷಗಳ ಬಳಿಕ ಸೇತುರಾಂ ಅವರು ಧಾರಾವಾಹಿಯನ್ನು ನಿರ್ದೇಶನ ಮಾಡುತ್ತಿದ್ದು, ಮುಖ್ಯ ಪಾತ್ರವನ್ನೂ ನಿರ್ವಹಿಸುತ್ತಿದ್ದಾರೆ. ಶೀರ್ಷಿಕೆ ಗೀತೆ ಕೂಡ ಆಕರ್ಷಕವಾಗಿದೆ. ಅದನ್ನು ಎಚ್.ಎಸ್. ವೆಂಕಟೇಶಮೂರ್ತಿ ರಚಿಸಿದ್ದು, ವಾರಿಜಾಶ್ರೀ ಹಾಡಿದ್ದಾರೆ.

—ವೀಣಾ ಶಂಕರ್ ಬೆಂಗಳೂರು

'ಯುಗಾಂತರ' ಮೊದಲ ಸಂಚಿಕೆಯಲ್ಲೇ ಭರವಸೆಯನ್ನು ತಂದಿದೆ. ಕಠಿಣ ಸಂಭಾಷಣೆ ಆದರೂ ತುಂಬಾ ಅರ್ಥಗರ್ಭಿತವಾಗಿದೆ. ಪಳಗಿದ ಕಲಾವಿದರ ತಂಡ ನಟಿಸುತ್ತಿದೆ. ಸಂಭಾಷಣೆ ಮಾತ್ರ ಒಂದೇ ಧಾಟಿಯಲ್ಲಿದೆ. ಸ್ವಲ್ಪ ಬದಲಾವಣೆ ಅಗತ್ಯ ಇದೆ ಎಂದೆನಿಸುತ್ತದೆ. ತುಂಬಾ ದಿನಗಳ ನಂತರ ಪರಿಣಾಮಕಾರಿ ಧಾರಾವಾಹಿ ಬರುತ್ತಿದೆ ಎಂದು ಅನಿಸುತ್ತಿದೆ.

—ಭಾರತೀ ಗಂಗಾಧರ್, ಬೆಂಗಳೂರು

'ಯುಗಾಂತರ' ಅತ್ಯುತ್ತಮವಾಗಿದೆ. ಚುರುಕಾದ, ಕರಾರುವಕ್ಕಾದ ಮಾತು, ಗಟ್ಟಿ ಸಂಭಾಷಣೆ. ಅತಿರಂಜಿತ ದೃಶ್ಯಗಳಿಲ್ಲ. ಸೇತುರಾಂ ಅವರ ವಿಶಿಷ್ಟ ಶೈಲಿ ಇದರಲ್ಲಿಯೂ ಅಚ್ಚಾಗಿದೆ. ಮಧ್ಯಮ ವರ್ಗ ಜೀವನ ನಡೆಸಲು ಪಡುವ ಬವಣೆ ಮತ್ತು ಸಂಘರ್ಷ ಇದರಲ್ಲಿ ಚೆನ್ನಾಗಿ ಮೂಡಿ ಬಂದಿದೆ. ಒಟ್ಟಿನಲ್ಲಿ ಇದು ಮರಳುಗಾಡಿನಲ್ಲಿ ದೊರೆತ ಓಯಸಿಸ್.

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ಪ್ರತ್ಯಯ ಬಳಸಲೇಬೇಕು

ಚಂದನವಾಹಿನಿಯ 'ಥಟ್ ಅಂತ ಹೇಳಿ' ಇತ್ತೀಚೆಗೆ ವಿಶೇಷ ಸಂಚಿಕೆ ಪ್ರಸಾರವಾಯಿತು. ಅದರಲ್ಲಿ ನಿರೂಪಕ ಸೋಮೇಶ್ವರ್ ಅವರು 'ಕನ್ನಡದಲ್ಲಿ ವಿಭಕ್ತಿ ಪ್ರತ್ಯಯಗಳನ್ನು ಬಳಸಬೇಕು, ಇಲ್ಲದಿದ್ದರೆ ಬೇರೆಯ ಅರ್ಥವನ್ನು ಕೊಡುತ್ತದೆ' ಎಂದರು.

ಆ ಕಾರ್ಯಕ್ರಮವನ್ನು ಪತ್ರಕರ್ತರಿಗಾಗಿ ಆಯೋಜಿಸಲಾಗಿತ್ತು. ಅವರು ಭಾಷೆಯನ್ನು ಸರಿಪಡಿಸಿಕೊಳ್ಳುವ ಬಗ್ಗೆ ಪ್ರತಿಕ್ರಿಯಿಸಲಿಲ್ಲ. ಮೂರು ಬಾರಿ ಪ್ರಧಾನಿ ಆಗಿದ್ದು ಯಾರು ಎನ್ನುವ ಪ್ರಶ್ನೆಗೆ ಉತ್ತರ ವಾಜಪೇಯಿ ಎನ್ನುವುದು ಯಾರಿಗೂ ಗೊತ್ತಿರಲಿಲ್ಲ. ಹಲವು ಸರಳ ಪ್ರಶ್ನೆಗಳಿಗೆ ಉತ್ತರ ಸಿಗಲಿಲ್ಲ. ಜಾಲತಾಣಗಳ ಪ್ರಭಾವದಿಂದ ಮನುಷ್ಯನ ಮೆದುಳು ಕೂಡ ತನ್ನ ಸಂಗ್ರಹ ಸಾಮರ್ಥ್ಯವನ್ನು ಕಡಿಮೆ ಮಾಡಿಕೊಂಡಿದೆಯಾ ಎನ್ನುವ ಅನುಮಾನ ಮೂಡಿತು.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ವರ್ತಮಾನದ ಬಿಂಬ

ಕಲರ್ಸ್ ಕನ್ನಡದ 'ಗಿಣಿರಾಮ' ವರ್ತಮಾನದ ರಾಜಕೀಯ ವ್ಯವಸ್ಥೆಗೆ ಕನ್ನಡಿ ಹಿಡಿದಂತೆ ಇದೆ. ಪ್ರಸ್ತುತ ರಾಜಕಾರಣದಲ್ಲಿ ಬೇರೂರಿರುವ ವಂಶಪಾರಂಪರ್ಯದ ಬಗ್ಗೆ ಮಹತಿ ಪಾತ್ರದ ಮೂಲಕ ಮಾತನಾಡಿಸಿದ್ದಾರೆ. ಆಯಿ ಸಾಹೇಬ್ ಮಗ ಅರ್ಹತೆ ಇಲ್ಲದಿದ್ದರೂ ಯುವ ಅಧ್ಯಕ್ಷನನ್ನಾಗಿ ಮಾಡಲು ಮಾಡುವ ಕುತಂತ್ರ, ಜನ ಮತ್ತು ಪ್ರದೇಶಕ್ಕಿಂತ ಮಗನ ಅಭಿವೃದ್ಧಿಗೆ ಮಹತ್ವ ನೀಡುವ ಚಿತ್ರಣ ಚೆನ್ನಾಗಿದೆ.

ರಾಜಕಾರಣದ ಬಗ್ಗೆ ಅಸಹ್ಯಪಡುತ್ತಲೇ ತಮ್ಮ ಮಕ್ಕಳನ್ನು ಅಲ್ಲೇ ಬೆಳೆಸಬೇಕು ಎನ್ನುವ ಹಪಹಪಿ ಇದ್ದೇ ಇರುತ್ತದೆ. ಅದನ್ನು ಸೂಕ್ಷ್ಮವಾಗಿ ಗ್ರಹಿಸಿರುವುದು ಇಲ್ಲಿ ಕಾಣಿಸುತ್ತದೆ.

—ರೇಣುಕಾ ಎ.ಪಿ., ಮೈಸೂರು